ಕೊಳೆಹಾಕಿ, ಹಣದ ತೊಂದರೆ ಅನುಭವಿಸುತ್ತಿರುವುದೂ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೇನಾದರೂ ಬಂದಿದ್ದರೆ, ನಗಟು ಮಾರಾಟ ಮಳಿಗೆಯವರು ಈ ರೀತಿ ಹಾಕಿರತಕ್ಕ ನಿರ್ಬಂಧವನ್ನು ತೊಡೆದುಹಾಕುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ ?

ಶ್ರೀಮತಿ ಇ. ಇ. ವಾಜ್.—ಕಡ್ಡಾಯವಾಗಿ ಇಂತಿಷ್ಟು ಬಟ್ಟೆಯನ್ನು ಸೇವಾ ಸಹಕಾರ ಸಂಘಗಳವರು ಮಾರಾಟ ಮಳಿಗೆಯಿಂದ ತೆಗೆದುಕೊಳ್ಳಬೇಕೆನ್ನುವ ನಿರ್ಬಂಧ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೆ, ಅನೇಕ ಕಡೆ ಕೆಲವು ಸಹಕಾರ ಸಂಘಗಳು ಈ ಬಟ್ಟೆಗಳನ್ನು ಉದಾಸೀನ ಮನೋಭಾವನೆಯಿಂದ ಕೊಂಡುಕೊಳ್ಳುತ್ತಾ ಇಲ್ಲ. ಆದರೆ, ಹಣದ ಕೊರತೆಯಿಂದ ಕೆಲವು ಸಹಕಾರ ಸಂಘಗಳಲ್ಲಿ ಬಟ್ಟೆಯ ಸ್ಟಾಕ್ ಇರುವ ಕಡೆಗೆ ಕೇಂದ್ರ ಸರ್ಕಾರದವರು 13.69 ಲಕ್ಷ ರೂಪಾಯಿಗಳ ಸಹಾಯ ಒದಗಿಸಿ ಅನುಕೂಲ ಮಾಡಿಕೊಡುತ್ತಿದ್ದಾರೆ ಇನ್ನೂ ಏನಾದರೂ ತೊಂದರೆಗಳು ಇದ್ದರೆ, ಅದಕ್ಕೆ ಸೂಕ್ತ ಪರಿಹಾರ ಕಂಡುಹಿಡಿಯುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಪಟ್ಟಣದಲ್ಲಿ ಬಟ್ಟೆಗಳ ಹಂಚಿಕೆ ಸುಸೂತ್ರವಾಗಿ ನಡೆಯುತ್ತಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಆದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಮೂಲಕ ಹಂಚುವ ವ್ಯವಸ್ಥೆ ಇರುವಾಗ, ಅನೇಕ ಸಹಕಾರ ಸಂಘಗಳಲ್ಲಿ ಹಣ ಇಲ್ಲದೆ. ಮತ್ತೆ ಇರುವ ಬಟ್ಟೆ ಮಾರಾಟವಾಗದೆ ಇರುವುದು ನನ್ನ ಗಮನಕ್ಕೆ ಬಂದಿವೆ. ಆದುದರಿಂದ, ಯಾವ ರೀತಿಯಲ್ಲಾದರೂ ಅಲ್ಲಿ ಉಳಿದಿರುವ ಬಟ್ಟೆಗಳನ್ನು ಹಂಚಿಸುವುದಕ್ಕೆ ಏರ್ಪಾಡನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆಯೇ :

ಶ್ರೀಮತಿ ಇ. ಇ. ವಾಜ್.—ಸಹಕಾರ ಸಂಘಗಳಲ್ಲಿ ಏನಾದರೂ ತೊಂದರೆಗಳು ಇದ್ದರೆ, ಅದರ ಬಗ್ಗೆ ವಿಚಾರ ಮಾಡಿ ಏನಾದರೂ ಪರಿಹಾರ ಕಂಡುಹಿಡಿಯೋಣ. ಸಹಕಾರ ಸಂಘಗಳಿಂದ ನಾವು ಉತ್ತಮ ಕಾರ್ಯ ತೆಗೆದುಕೊಳ್ಳಬೇಕೆಂದರೆ ನಾವೆಲ್ಲರೂ ಅವುಗಳ ಬಗ್ಗೆ ಹೆಚ್ಚು ಉತ್ತೇಜನ ಕೊಡಬೇಕಾದುದು ಅವಶ್ಯಕ ಎನ್ನುವ ಮಾತನ್ನು ಹೇಳಬಯಸುತ್ತೇನೆ.

Formation of Batgira to Motakapalli road in Gulbarga District

55 Shri J. P. SARWESH (Sedam) —Will the Minister for Public Works be pleased to state :—

(*a*) whether Government is aware that Batgira to Motakapalli road in Gulbarga District is very important;

(*b*) in which year the formation of the road was taken up ;

(*c*) when it will be completed ?

Sri H. M. CHANNABASAPPA (Minister for Public Works).—

(*a*) Yes,

(*b*) During 1960-61, under Rural Communication Programme.

(*c*) It will be completed depending on the availabilty of lands as well as adequate funds under Rural Communication Programme.

SRI J. P. SARWESH.— Is it not an important road and at the same time cut short a distance of 15 miles from Sedam to Yadgir ? Will you kindly consider to take up and complete the road atleast in the coming year ?

† SRI H. M. CHANNABASAPPA.—A distance of 32.8 Kms from Batgira to Motakapalli has already been taken up by P.W.D.

ಅಧ್ಯಕ್ಷರು – ಶ್ರೀ ಬಿ. ಜಿ. ಬಣಕಾರ್ ಅವರ ಪ್ರಶ್ನೆಗೆ ಸಂಬಂಧಪಟ್ಟಂತೆ ಉಪ ಪ್ರಶ್ನೆಗಳನ್ನು ಶ್ರೀ ಕೆ. ಆರ್ ಎಸ್. ನಾಯುಡು ಅವರು ಕೇಳಬಹುದು.

Supply of Stationery to Government Offices

SRI K. R. SRINIVASULU NAYUDU (Shantinagar) [On behalf of SRI B. G. BANAKAR [(Hirekerur).—

28. (126) Will the Minister for Education be pleased to state :—

(*a*) the details of stationery that is supplied to the Government Offices in the State during 1974–75 ;

(*b*) the total value of stationery that is supplied to the Government Offices during 1974–75 ?

SRI M. MALLIKARJUNASWAMY (Minister for Education).—

(*a*) *Vide* Statement placed on the table of the House.*

(*b*) Rs. 67,65,398–19 p.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರದ ಪ್ರಕಾರ ಸುಮಾರು 67 ಲಕ್ಷ ರೂಪಾಯಿಯಷ್ಟು ಸಾಮಗ್ರಿಗಳನ್ನು ಕೊಟ್ಟಿದ್ದಾರೆ ಎಂದು ಗೊತ್ತಾಗುತ್ತದೆ. ಆದರೆ, ಕೆಲವು ಜಿಲ್ಲೆಗಳಲ್ಲಿ ಕೊಟ್ಟಿರತಕ್ಕ ಸಾಮಾಗ್ರಿಗಳ ಕೊರತೆ ಇದೆ ಎಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೇನಾದರೂ ಬಂದಿದ್ದರೆ, ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಇಲ್ಲಿ ಕೊರತೆ ಬರತಕ್ಕ ಪ್ರಶ್ನೆಯೇ ಉದ್ಭವಿಸುವುದಿಲ್ಲ, ರಾಜ್ಯ ಸರ್ಕಾರದ ಅಡಿಯಲ್ಲಿ ಕೆಲಸ ಮಾಡತಕ್ಕ ಕಛೇರಿಗಳು ಮತ್ತು ಸಂಸ್ಥೆಗಳ ವಿವರಗಳೊಡನೆ ಇಷ್ಟು ಬೇಕು ಎಂದು ಇಂಡೆಂಟ್ ಹಾಕುತ್ತಾರೆ ; ಸರ್ಕಾರದವರು ಅದನ್ನು ಸಪ್ಲೈ ಮಾಡುತ್ತಾರೆ ಆದುದರಿಂದ, ಇಲ್ಲಿ ಕೊರಕೆಯ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಪ್ರಮಾಣದ ಸಾಮಾಗ್ರಿಗಳನ್ನು ಕೊಟ್ಟಿದ್ದಾರೆ ಎಂಬ ಮಾಹಿತಿಯನ್ನು ಮಾನ್ಯ ಮಂತ್ರಿಗಳು ಒದಗಿಸುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಜಿಲ್ಲಾವಾರು ಆಂಕಿ-ಅಂಶಗಳಿಂದ ಪ್ರತ್ಯೇಕ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕಳುಹಿಸಿ ಕೊಟ್ಟರೆ, ಉತ್ತರ ಕೊಡುತ್ತೇವೆ. ಸಧ್ಯಕ್ಕೆ ಇದು ಸಪ್ಲಿಮೆಂಟರಿ ಪ್ರಶ್ನೆಯಾಗಿ ಉದ್ಭವವಾಗುವುದಿಲ್ಲ.

Construction of cattle sheds in Bangalore City Corporation Divisions.

357 SRI K. R. SRINIVASULU NAYUDU (Shantinagar).—Will the Minister for Law and Municipal Administration be pleased to state :—

(*a*) whether there is any scheme before the Bangalore City Corporation to construct Cattle shed in each Corporation Division ;

*Copy placed in the Legislature library *vide* No. 5 dated 5–2–1976.